# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 175 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಆರ್.ಧರ್ಮಸೇನ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 03.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಅಳತೆ ಮತ್ತು ತೂಕಗಳಲ್ಲಿ ಗ್ರಾಹಕರಿಗೆ ವಂಚಿಸುವ ಮಾರಾಟಗಾರರನ್ನು ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಯಾವ ಕ್ರಮಗಳಲ್ಲಿ ಅನುಸರಿಸಲಾಗುತ್ತದೆ;</td><td>ತೂಕ ಮತ್ತು ಅಳತೆಯಲ್ಲಿ ಗ್ರಾಹಕರಿಗೆ ಆಗುವ ವಂಚನೆಯನ್ನು ತಡೆಯಲು ಪ್ರತೀ ವರ್ಷ ವ್ಯಾಪಾರಸ್ಥರುಗಳ ಬಳಿ ಇರುವ ತೂಕ ಮತ್ತು ಆಳತೆ ಸಾಧನಗಳ ನಿಖರತೆಯನ್ನು ಖಚಿತಪಡಿಸಿಕೊಂಡು ಮುದ್ರೆ ಮಾಡಲಾಗುತ್ತಿದೆ ಹಾಗೂ ಅನಿರೀಕ್ಷಿತ ತಪಾಸಣೆ ಕೈಗೊಂಡು ವಂಚನೆ ಕಂಡು ಬಂದಲ್ಲಿ ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಮೊಕದ್ದಮೆ ಹೂಡಲಾಗುತ್ತಿದೆ.</td></tr>
<tr><td>ಆ.</td><td>ಅಳತೆ ಮತ್ತು ತೂಕಗಳ ನಿಯಂತ್ರಣ ಇಲಾಖೆಯಲ್ಲಿ ಇನ್ ಸ್ಪೆಕ್ಟರ್ ಗಳು ಎಷ್ಟು ಪ್ರಕರಣಗಳನ್ನು ತಪಾಸಣೆ ಮಾಡಿ ದಂಡ ವಿಧಿಸಿದ್ದಾರೆ. (ಬೆಂಗಳೂರು ನಗರದ ಕಳೆದ ಎರಡು ವರ್ಷಗಳ ಮಾಹಿತಿಯನ್ನು ನೀಡುವುದು)</td><td>ಕಾನೂನು ಮಾಪನಶಾಸ್ತ್ರ ಇಲಾಖೆಯು ಕಳೆದ ಎರಡು ವರ್ಷಗಳಲ್ಲಿ ಕೈಗೊಂಡ ತಪಾಸಣೆ ಮತ್ತು ವಿಧಿಸಿದ ದಂಡನೆಯ ಮಾಹಿತಿಯು ಈ ಕೆಳಕಂಡಂತಿರುತ್ತದೆ.<br><br>ರಾಜ್ಯದ ಎಲ್ಲಾ ಇನ್‌ಸ್ಪೆಕ್ಟರ್ ಗಳ ಪ್ರಕರಣಗಳ ತಪಾಸಣೆ ಮತ್ತು ದಂಡ ವಿಧಿಸಿದ ಮಾಹಿತಿ.<br><table><tr><th>ವರ್ಷ</th><th>ತಪಾಸಣೆಗಳು</th><th>ದಂಡ</th></tr><tr><td>2017-18</td><td>47,768</td><td>4,04,01,930/-</td></tr><tr><td>2018-19</td><td>47,868</td><td>3,85,64,499/-</td></tr></table><br>ಬೆಂಗಳೂರು ನಗರದ ಇನ್‌ಸ್ಪೆಕ್ಟರ್ ಗಳು ಕಳೆದ ಎರಡು ವರ್ಷಗಳ ತಪಾಸಣೆ ಮತ್ತು ದಂಡದ ಮಾಹಿತಿ ಈ ಕೆಳಕಂಡಂತಿರುತ್ತದೆ.<br><table><tr><th>ವರ್ಷ</th><th>ತಪಾಸಣೆಗಳು</th><th>ದಂಡ</th></tr><tr><td>2017-18</td><td>8009</td><td>1,04,47,900/-</td></tr><tr><td>2018-19</td><td>10746</td><td>1,08,83,800/-</td></tr></table></td></tr>
</table>

| | | |
|---|---|---|
| ೩. | ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಗ್ರಾಹಕರಿಗೆ ಅನ್ಯಾಯವಾಗದಂತೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು? | ತೂಕ ಮತ್ತು ಅಳತೆಯಲ್ಲಿ ಗ್ರಾಹಕರಿಗೆ ಆಗುವ ವಂಚನೆಯನ್ನು ತಡೆಯಲು ಪ್ರತೀ ವರ್ಷ ವ್ಯಾಪಾರಸ್ಥರುಗಳ ಬಳಿ ಇರುವ ತೂಕ ಮತ್ತು ಅಳತೆ ಸಾಧನಗಳ ನಿಖರತೆಯನ್ನು ಖಚಿತಪಡಿಸಿಕೊಂಡು ಮುದ್ರೆ ಮಾಡಲಾಗುತ್ತಿದೆ ಹಾಗೂ ಇಲಾಖೆಯಲ್ಲಿರುವ ಐದು(5) ತನಿಖಾ ತಂಡಗಳು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳು ಆಗಿಂದ್ದಾಗ್ಗೆ ವ್ಯಾಪಾರಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ಕೈಗೊಳ್ಳಲಾಗುತ್ತಿದೆ ಹಾಗೂ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಅಂತವರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. |

ಆನಾಸ 05 ಕಾಮಾಸೇ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.